'ಪ್ರಜ್ಞೆ'ಯ ಉಗಮಕ್ಕೆ ಕಾರಣವಾದದ್ದನ್ನೂ ಆ ಪ್ರಜ್ಞೆಯೇ ಅರಿತುಕೊಳ್ಳುತ್ತದೆ. ಹಾಗಾಗಿ ಒಂದು ರೀತಿಯಲ್ಲಿ ಈ 'ಅ ಸ ಗ ತ'ಗಳು ಪ್ರಜ್ಞೆಯ ಉಗಮಕ್ಕೆ ಕಾರಣವಾಗಿ, ಆ ಮೂಲಕ ತಮ್ಮ ಔಚಿತ್ಯವನ್ನು ತಾವೇ ಅರಿತುಕೊಂಡಿವೆ ಎನ್ನಬಹುದು. ಹಾಗೆಂದೇ ಅಂತಹ ವಿಶೇಷತೆಯನ್ನು ಸಾಧ್ಯವಾಗಿಸಿಕೊಂಡಿರುವ ಈ 'ಅ ಸ ಗ ತ'ಗಳು ಜೀವಜಗತ್ತಿನ ಮೂರನೆಯ ಅದ್ಭುತಗಳು.

ಒಟ್ಟಿನಲ್ಲಿ, ಈ ಮೂರೂ ವಿಶೇಷಗಳು ಒಂದರಿಂದಾಗಿ ಮತ್ತೊಂದು ಅಸ್ತಿತ್ವಕ್ಕೆ ಬಂದ ಶಕ್ತಿಗಳು. 'ಅ ಸ ಗ ತ'ಗಳು ಇಲ್ಲದಿದ್ದಲ್ಲಿ 'ಜೀವ' ಇರುತ್ತಿರಲಿಲ್ಲ. 'ಜೀವ'ವಿಲ್ಲದೆ, ಜೀವ ವಿಕಾಸಗೊಳ್ಳುತ್ತಿರಲಿಲ್ಲ. ವಿಕಾಸಕ್ರಿಯೆ ನಡೆಯದೆ ಮಾನವ ಮತ್ತು ಅವನ ಪ್ರಜ್ಞೆ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಪ್ರಜ್ಞೆ ಇಲ್ಲದೆ, ಈ ಭೂಮಿಯ ಮೇಲೆ ನಮ್ಮ ಬಗ್ಗೆ, ವಿಕಾಸದ ಬಗ್ಗೆ ಹಾಗೂ 'ಅಸಗತ'ಗಳ ಔಚಿತ್ಯದ ಬಗ್ಗೆ ಅರಿವಾಗುತ್ತಲೇ ಇರಲಿಲ್ಲ. ಪ್ರಜ್ಞೆಯ ಮೂಲಕ ನಾವು ಅರಿತಿರುವ ಒಂದು ಸತ್ಯವೆಂದರೆ, ನಮ್ಮ ಇಡೀ ಜೀವಸಂಕುಲವು ಈ 'ಅ ಸ ಗ ತ' ಎಂಬ ನಾಲ್ಕು ಅಕ್ಷರಗಳಿಂದ ರಚನೆಗೊಂಡ ವಿವಿಧ ಲೇಖನಗಳು ಅಥವಾ ಈ ನಾಲ್ಕು ಸ್ವರಗಳಿಂದ ರಚಿತಗೊಂಡ ವೈವಿಧ್ಯಮಯ ರಾಗಗಳು. ಆ ನಾಲ್ಕೂ ನ್ಯೂಕ್ಲಿಯೋಟೈಡ್‌ಗಳ ನಡುವೆ ಏರ್ಪಡುವ ಬಂಧನವನ್ನು ನಾಲ್ಕು ತಂತಿಗಳು ಎನ್ನಬಹುದು. ನನಗಂತೂ ಈ ನಾಲ್ಕು ಸ್ವರಗಳ ನಡುವಿನ ನಾಲ್ಕು ತಂತಿಗಳಿಂದಾದ ಬಂಧವು ದ.ರಾ. ಬೇಂದ್ರೆಯವರ 'ನಾಕು ತಂತಿ'ಯನ್ನೇ ನೆನಪಿಸುತ್ತದೆ. ಆ ಸ್ಫೂರ್ತಿಯಿಂದಲೇ ಈ ಪದ್ಯವನ್ನೂ ಹೆಣೆಯಲು ಸಾಧ್ಯವಾಯಿತು ಕೂಡ.

**ನಾಲ್ಕು ಸ್ವರಗಳು:**
**ನಾಲ್ಕು ನ್ಯೂಕ್ಲಿಯೋಟೈಡ್‌ಗಳು**
ಅ =Adenosine; ಸ= Cytosin;
ಗ= Guanine; ತ = Thyrosin




**ನಾಕು ಸ್ವರ**[11]

ನಾನು, ನೀವು, ಮಾವು, ಬೇವು
ಅವರು, ಇವರು, ಹಾವು, ಗೋವು
ಸಕಲ ಜೀವವೂ
ನಾಕು ಸ್ವರಗಳ ಗಾನಲಹರಿ
'ಅ' 'ಸ' 'ಗ' 'ತ'ಗಳ ಕಾವ್ಯಮಯೂರಿ
ನಾಕು ತಂತಿಗಳ ತಂಬೂರಿ

ಅಂದು..
'ಅ' 'ಸ' 'ಗ' 'ತ'ಗಳು
ಬಿಡಿಯಾಗಿ ಅಸಂಗತ...
ಬಂಜೆ ಧರೆಯ
ಭಾವಿ ಜೀವದ ಬಸಿರಹೊತ್ತ
ನಿರ್ಜೀವ ಬೀಜಗಳು
ಇಂದು,
ವಿಶ್ವದ ಜೀವಭಾಷೆಯ ಮೂಲಾಕ್ಷರಗಳು

ಅಂದು...
ಅ ಸ ಗ ತ ಗಳು
ಅತ್ತಿತ್ತ ಸತತ ಅರಸುತ್ತ ಸೂಕ್ತ ಸಂಗಾತ
ವಿರಹದಿ ಕುಣಿದವು ತಕಧಿಮಿತ.
'ಸ'ಗೆ 'ಗ' ಹಾಗೆ 'ಅ'ಗೆ 'ತ'
ಅನಂತ ಗೆಣೆತನದ ಸೆಳೆತ
ಅಂದಿನ ಆ 'ಅತ' 'ಸಗ' ಗಳ ಸಂಗಾತ...
ಬಿತ್ತಿತ್ತು ಜೀವಗಳ ನಡುವಿನ ಸಾಂಗತ್ಯ.

ನಂತರ...
ಅಗಣಿತ 'ಅತ' 'ಸಗ'ಗಳ ತಂತುಗಳ ಕುಣಿತ,
ಜೋಡುಸುರುಳಿಗಳ ನುಲಿತ
ಹತವೋ ಹಿತವೋ,
ಸತತಗತಿಯಲುರುಳಿದವು ಎತ್ತೆತ್ತಲೋ
ಹತವಾದವು ಹಲವು,
ಹಿತವಾದ ಕೆಲವು ಮೀಟಿದವು ಜೀವ ಸಂಗೀತ;
ನಾಕು ಸ್ವರಗಳ, ಜೋಡುಸುರುಳಿಗಳ ಭವಗೀತ,
ಭಾವಗೀತ, ಜೀವದ ಭಗವದ್ಗೀತ...
ಅಸಗತಗಳಾದವು
ಜೀವ ಭಾಷೆಯ 'ಅ'... 'ಕ್ಷ'ಗಳು

ಆ ಜೀವನದಿ ಹರಿದ ಪಥದಿ
ಎಲ್ಲೋ ಜನಿಸಿತೊಂದು ಜೀವಿ,


















11. ದ.ರಾ. ಬೇಂದ್ರೆ ಅವರ 'ನಾಕು ತಂತಿ'ಯ ಸ್ಫೂರ್ತಿ